# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ದಿನಾಂಕ: 03-03-2024 ರಂದು ಬೆಳಗ್ಗೆ 8.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿ.**

**ಉಪಸ್ಥಿತರು**

1. ಪ್ರೊ. ಎನ್.ಕೆ. ಲೋಕನಾಥ್ — ಕುಲಪತಿ ಹಾಗೂ ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ — ಸದಸ್ಯರು
   ಪ್ರೊ. ಎ.ಹೆಚ್.ಎಂ. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು
   ಕಾಲೇಜು ಶಿಕ್ಷಣ ಇಲಾಖೆ, ಮೈಸೂರು
3. ಪ್ರೊ. ಸೋನರ್ ನಂದಪ್ಪ — ಸದಸ್ಯರು
4. ಪ್ರೊ. ಟಿ.ಆರ್. ಮಾರುತಿ — ಸದಸ್ಯರು
5. ಡಾ. ಟಿ.ಆರ್. ಚಂದ್ರಶೇಖರ್, ಬಿ.ಇ., ಎಂಐಇ., ಎಂ.ಎ., ಪಿಎಚ್.ಡಿ., — ಸದಸ್ಯರು
6. ಶ್ರೀ ಗೋಕುಲ್ ಗೋವರ್ಧನ್, ಎಲ್ಎಲ್‌ಬಿ., ಎಂಬಿಎ., — ಸದಸ್ಯರು
7. ಡಾ. ಆಂತೋಣಿ ಪೌಲ್ ರಾಜ್ .ಸಿ — ಸದಸ್ಯರು
8. ಡಾ. ಗಣೇಶ್ .ಕೆ — ಸದಸ್ಯರು
9. ಡಾ. ಮುಜೀದ ಬಾನು — ಸದಸ್ಯರು
10. ಶ್ರೀ ಮಹದೇಶು — ಸದಸ್ಯರು
11. ಶ್ರೀ ನಾಗರಾಜು .ಸಿ — ಸದಸ್ಯರು
12. ಡಾ. ಬಸವರಾಜು .ಸಿ — ಸದಸ್ಯರು
13. ಡಾ. ಶಿಲ್ಪ .ಜೆ — ಸದಸ್ಯರು
14. ಶ್ರೀ ನಟರಾಜು .ಹೆಚ್.ಎಸ್ — ಸದಸ್ಯರು
15. ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು
16. ಶ್ರೀಮತಿ ವಿ.ಆರ್. ಶೈಲಜ, KAS — ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ
17. ಶ್ರೀಮತಿ ರೇಖಾ.ಕೆ.ಎಸ್., ಕೆಎಸ್ಎಎಸ್, ಹಣಕಾಸು ಅಧಿಕಾರಿಗಳು — ವಿಶೇಷ ಆಹ್ವಾನಿತರು

**ಅನುಪಸ್ಥಿತರು:**

1. ಶ್ರೀ ಸುರೇಶ್, ಕೆ.ಎ.ಎಸ್, ನಿರ್ದೇಶಕರು
   ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್
3. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಸನ್ಮಾನ್ಯ ಕುಲಪತಿಗಳು ವಿಶೇಷ ಸಿಂಡಿಕೇಟ್ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಮತ್ತೊಮ್ಮೆ ಸ್ವಾಗತಿಸಿ ಮತ್ತು 104ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಎಲ್ಲಾ ಸದಸ್ಯರುಗಳು ಸಹಕರಿಸಬೇಕೆಂದು ಕೋರುತ್ತಾ, ಸಭೆಯ ವಿಷಯ ಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ಅನುಮತಿ ನೀಡಿದರು.

ತದನಂತರ ಕುಲಸಚಿವರು ಚರಿತ್ರಾರ್ಹವಾದ ಮೈಸೂರು ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಮತ್ತು ವಿವಿಧ ಕೋರ್ಸುಗಳ ಪದವಿಗಳನ್ನು ಪ್ರದಾನಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ಸಿಂಡಿಕೇಟ್ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

| | |
|---|---|
| **ವಿಷಯ ಸಂಖ್ಯೆ: 1** | 104ನೇ ವಾರ್ಷಿಕ ಘಟಿಕೋತ್ಸವದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ವಿವಿಧ ಪದವಿಗಳನ್ನು 104ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನಿಸುವ ಸಲುವಾಗಿ ಮಂಡಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| **ವಿಷಯ ಸಂಖ್ಯೆ: 1** | 104ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ. |
| **ತೀರ್ಮಾನ** | ಕುಲಾಧಿಪತಿಗಳ ಕಾರ್ಯದರ್ಶಿಯವರ ಪತ್ರ ದಿನಾಂಕ: 22-02-2024ರ ಅನ್ವಯ 104ನೇ ವಾರ್ಷಿಕ ಘಟಿಕೋತ್ಸವದಲ್ಲಿ (1) ಪದ್ಮವಿಭೂಷಣ ಶ್ರೀ ಎಸ್.ಎಂ. ಕೃಷ್ಣ, ಮಾಜಿ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಮಾಜಿ ವಿದೇಶಾಂಗ ವ್ಯವಹಾರಗಳ ಸಚಿವರು, ಭಾರತ ಸರ್ಕಾರ, ಮಾಜಿ ರಾಜ್ಯಪಾಲರು, ಮಹಾರಾಷ್ಟ್ರ, (2) ನಾಡೋಜ ಪ್ರೊ. ಡಾ. ಭಾಷ್ಯಂ ಸ್ವಾಮಿ, ಪೀಠಾಧಿಪತಿ, ಶ್ರೀ ಸುದರ್ಶನ ನರಸಿಂಹ ಕ್ಷೇತ್ರ, ಮೈಸೂರು ಮತ್ತು (3) ಶ್ರೀ ಎಂ.ಆರ್. ಸೀತಾರಾಮ್, ಮಾಜಿ ಸಂಪುಟ ದರ್ಜೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಶಿಕ್ಷಣ ತಜ್ಞರು ಮತ್ತು ಉಪಾಧ್ಯಕ್ಷರು, ಗೋಕುಲ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು ಇವರುಗಳಿಗೆ ಕ್ರಮವಾಗಿ LL.D., ಮತ್ತು D.Litt., ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಗೌರವಾನ್ವಿತ ಕುಲಾಧಿಪತಿಗಳು ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

ಕೊನೆಯಲ್ಲಿ ಕುಲಸಚಿವರು ಸಭೆಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ವಂದನೆಗಳನ್ನರ್ಪಿಸುವ ಮೂಲಕ ವಿಶೇಷ ಸಿಂಡಿಕೇಟ್ ಸಭೆಯನ್ನು ಮುಕ್ತಾಯಗೊಳಿಸಿದರು.

**ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ** **ಕುಲಪತಿ ಹಾಗೂ ಅಧ್ಯಕ್ಷರು**